# ಕಂಪು ಕಂನಡಿಗರ ಪಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ದೀಪಾವಳಿ ಸಂಚಿಕೆ

ಸಂಪುಟ 2 ಸಂಚಿಕೆ 1

Newsletter of MKANT
Deepavali 2011


www.mallige.org


## ಈ ಸಂಚಿಕೆಯಲ್ಲಿ


| | |
|---|---|
| ದೀಪಾವಳಿಯ ಜ್ಯೋತಿ | 1 |
| ಅಧ್ಯಕ್ಷರ ಸಂದೇಶ | 2 |
| ಸಂಪ್ರದಾಯದ ಹಾಡು | 3 |
| ಸಂಪಾದಕೀಯ | 3 |
| ಮಲ್ಲಿಗೆ ಮೊಗ್ಗುಗಳು | 4 |
| ಚಿಣ್ಣರ ಚಿತ್ತಾರ | 5 |
| ಚಿತ್ರನಗರಿ | 6 |
| ಖೋ-ಖೋ ಕತೆ | 7 |
| ಶುಭಾಶಯ | 7 |
| ಪಿಕ್‌ನಿಕ್ | 8 |
| ಪಾಕಂಪಪ್ಪು | 9 |
| ಕ್ರೀಡಾಲೋಕ | 10 |


## ದೀಪಾವಳಿಯ ಜ್ಯೋತಿ


ಕನಕ ತಿರುಮಲೆ



ಹೊಸ ಹರುಷ, ಹೊಸತನ ಎಲ್ಲೆಲ್ಲೂ ಪಸರಿಸಲಿ
ಬೆಳಗಲಿ ಎಲ್ಲೆಡೆ ದೀಪಾವಳಿಯ ಜ್ಯೋತಿ॥

ಕನ್ನಡ ಸಾಹಿತ್ಯದ ಮಕುಟಮಣಿಯ ಬೆಳಕು ಚಿಮ್ಮಲಿ
ಮಿನುಗಲಿ ಕಂಬಾರರ ಜ್ಞಾನಪೀಠದ ಜ್ಯೋತಿ॥

ನೀಗಲಿ ಕರ್ನಾಟಕದ ಕತ್ತಲಿನ ಬವಣೆ
ಬೆಳಗಲಿ ನಿರಂತರ ವಿದ್ಯುಚ್ಛಕ್ತಿಯ ಜ್ಯೋತಿ॥



ಸುಗಮವಾಗಲಿ ಮೆಟ್ರೊ ರೈಲಿನ ಪಯಣ
ಉದ್ಯಾನ ನಗರಿಯಾಗಲಿ ಆನಂದದ ಜ್ಯೋತಿ॥

ಕಳೆಯಲಿ ರಾಜಕೀಯದ ಅಂಧಕಾರ
ಮೊಳಗಲಿ ಎಲ್ಲೆಲ್ಲೂ ನ್ಯಾಯದ ಜ್ಯೋತಿ॥

ತರಲಿ ಈ ದೀಪಾವಳಿಯು ಸಂತಸ ಎಲ್ಲರ ಮನದಲಿ
ಜಾಗೃತವಾಗಲಿ ಮಾನವೀಯತೆಯ ಜ್ಯೋತಿ॥



**ಎಲ್ಲರಿಗೂ ದೀಪಾವಳಿ ಹಾಗೂ ರಾಜ್ಯೋತ್ಸವದ ಶುಭಾಶಯಗಳು**

## ಅಧ್ಯಕ್ಷರ ಸಂದೇಶ

- ರಾಜಶ್ರೀ ರಮೇಶ್



ಮಲ್ಲಿಗೆ ಸಂಘದ ನನ್ನ ಪ್ರೀತಿಯ ಬಂಧು ಮಿತ್ರರಿಗೆ,

ಕಂಪು ಇ-ಪತ್ರಿಕೆ ಪುನರಾರಂಭವಾಗಿ ಒಂದು ವರ್ಷವಾಯ್ತು. ಕಂಪು ವರ್ಷೋತ್ಸವದ ಸಂದರ್ಭದಲ್ಲಿ,ಇದರ ಸತತ ಬೆಳವಣಿಗೆಗೆ ಕಾರಣರಾದ ಸಂಪಾದಕಿ ಪೂರ್ಣಿಮ ಅವರಿಗೆ ನನ್ನ ಅಭಿನಂದನೆಗಳು. ಪೂರ್ಣಿಮಗೆ ಸಹಕಾರ ಹಾಗು ಪ್ರೋತ್ಸಾಹ ನೀಡುತ್ತಿರುವ ನನ್ನ ಮಲ್ಲಿಗೆ ಬಂಧುಗಳಿಗೆ ಮತ್ತೊಮ್ಮೆ ಧನ್ಯವಾದಗಳು.



ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ ಪರವಾಗಿ ದೀಪಾವಳಿ ಹಬ್ಬದ, ಕರ್ನಾಟಕ ರಾಜ್ಯೋತ್ಸವದ ಹಾಗೂ ಮಕ್ಕಳ ದಿನಾಚರಣೆಯ ಹಾರ್ದಿಕ ಶುಭಾಶಯಗಳು.



ನಿಮಗೆಲ್ಲ ಆಗಲೆ ತಿಳಿದಿರುವ ಹಾಗೆ, ಈ ಹಬ್ಬಗಳನ್ನು ನಾವೆಲ್ಲ ಒಟ್ಟಿಗೆ ಸಂತೋಷದಿಂದ ಆಚರಿಸಲು ನಿಮ್ಮ ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಬಹಳ ಉತ್ಸಾಹದಿಂದ ತಯಾರಿ ನಡೆಸುತ್ತಿದ್ದಾರೆ.
ನಮ್ಮ ಮಲ್ಲಿಗೆ ಹೂಗಳು, ಮಲ್ಲಿಗೆ ಮೊಗ್ಗುಗಳು ನಿಮ್ಮ ಮನೋರಂಜನೆಗೆ ಹಾಡು, ನೃತ್ಯ, ನಾಟಕ ಅಂತ ವಿವಿಧ ಕಾರ್ಯಕ್ರಮಗಳನ್ನು ಮುಂದಿಡಲು ಶ್ರಮ ಪಟ್ಟು ಅಭ್ಯಾಸ ಮಾಡುತ್ತಿದ್ದಾರೆ. ನೀವೆಲ್ಲ ನಿಮ್ಮವರೊಡನೆ ಬಂದು ನಮ್ಮೆಲ್ಲರ ಜೊತೆ ಒಂದು ಸುಂದರ ಸಂಜೆ ಕಳೆಯಿರಿ ಎಂದು ವಿನಂತಿ.

ಮನಸ್ಸಿಗೆ ಒಳ್ಳೆ ಮನರಂಜನೆ, ನಾಲಿಗೆಗೆ ರುಚಿಯಾದ ಊಟ, ಹರಟೆಗೆ ನೂರಾರು ಕನ್ನಡಿಗರು, ಹಬ್ಬ ಅಂದರೆ, ಇದೆ ಅಲ್ಲವಾ? ಬನ್ನಿ, ಸಿಗೋಣ.

ಇಂತಿ ನಿಮ್ಮ ವಿಶ್ವಾಸಿ
ರಾಜಶ್ರಿ ರಮೇಶ್

ಕನ್ನಡಕ್ಕೆ ಒಟ್ಟು ಎಂಟು ಜ್ಞಾನಪೀಠ ಪ್ರಶಸ್ತಿ

ಮುಖಪುಟ

## ಸಂಪ್ರದಾಯದ ಹಾಡು

- ಪೂರ್ಣಿಮ ಸುಬ್ರಹ್ಮಣ್ಯ

ದೀಪಾರತಿಯ ತನ್ನಿ ದೀಪಾರತಿ
ಧರೆಯುಳುತ್ತಮ ನಮ್ಮ
ಲಕ್ಷ್ಮೀರಮಣನಿಗೆ ॥




ನೀರಲಿ ಮುಳುಗಿ ವೇದಗಳನ್ನು ತಂದವಗೆ
ಮೇರುಗಿರಿಯನೆ ಬೆನ್ನ ಮೇಲೆ ಪೊತ್ತವಗೆ
ತಿರೆಯ ಕೋರೆಯಲಿಟ್ಟ ಕರುಣಿ ವರಾಹನಿಗೆ
ಎಳೆಯ ತರಳನ ಪೊರೆದ ನಾರಸಿಂಹನಿಗೆ॥

ಬಲಿಯ ದಾನವ ಬೇಡಿದಂಥ ವಟು ವಾಮನಗೆ
ಭೂಮಂಡಲವ ತಿರುಗಿದ ಪರಶು ರಾಮನಿಗೆ
ತಂದೆ ವಾಕ್ಯವ ಕಾಯ್ದ ಶ್ರೀರಾಮಚಂದ್ರನಿಗೆ
ನರಕನನು ಕೊಂದ ಮುರವೈರಿ ಮುಕುಂದನಿಗೆ॥

ಕರುಣಾಂತರಂಗಗೆ ಬುದ್ಧ ರೂಪನಿಗೆ
ಕಲಿಯುಗವ ಕಾಯ್ವಂಥ ಕಲ್ಕಿ ಅವತಾರಗೆ
ಹತ್ತು ಅವತಾರದಲಿ ಹೆಚ್ಚು ಲೀಲೆಯ ತೋರಿ
ಆಪತ್ತಿಗೊದಗುವ ಆದಿ ನಾರಾಯಣಗೆ॥

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ



**ಕಂ**ಪು ಓದುಗ ಬಳಗಕ್ಕೆ ದೀಪಾವಳಿ ಹಬ್ಬದ ಹಾಗೂ ರಾಜ್ಯೋತ್ಸವದ ಶುಭಾಶಯಗಳು.

ದೀಪಾವಳಿ ಹೆಸರೇ ಹೇಳುವಂತೆ ಬೆಳಕಿನ ಹಬ್ಬ. ಹೊಳೆವ ಹಣತೆಯ ಸಾಲು "ಬೆಳಕು ಎಲ್ಲೆಡೆಯಿಂದಲೂ ಬರಲಿ, ಬೆಳಕು ಎಲ್ಲೆಡೆ ಹರಡಲಿ" ಎಂಬ ಆಶಯವನ್ನು ಪ್ರತಿನಿಧಿಸುತ್ತವೆ. ಕೇವಲ ಹೊರಗಷ್ಟೇ ಅಲ್ಲ, ನಮ್ಮೊಳಗಿನ ಅಂಧಕಾರವ ಕರಗಿಸಲು ಒಂದು ಪುಟ್ಟ ಜ್ಞಾನಜ್ಯೋತಿ ಉದ್ಭವಿಸಲಿ.

ಇನ್ನು ರಾಜ್ಯೋತ್ಸವ, ನಮ್ಮ ಚೆಲುವ ಕನ್ನಡ ನಾಡು ಉದಯವಾಗಿ ೫೫ ವರ್ಷಗಳಾದವು. ಈ ಬಾರಿ ಕನ್ನಡಿಗರಿಗೆ ಕೊಡುಗೆ, ಜ್ಞಾನಪೀಠ ಪ್ರಶಸ್ತಿ ಸಂದದ್ದು ಕನ್ನಡ ಸಾಹಿತ್ಯದ ಜಾನಪದ ಶಿಖರ ಸೂರ್ಯ "ಚಂದ್ರಶೇಖರ ಕಂಬಾರ"ರ ಮುಡಿಗೆ. ಜಾಗತೀಕರಣದ ಈ ಕಾಲದಲ್ಲಿ ಒಂದು ನುಡಿಯ ಮಾನ್ಯತೆ ಕೇವಲ ಭೌಗೋಳಿಕವಾಗಿ ಉಳಿದಿಲ್ಲ. ನಾಡು ಹಚ್ಚಿಟ್ಟ ದೀಪಸ್ತಂಭ, ನುಡಿ ಪಸರಿಸುವ ಗಂಧ. ನಾಡು–ನುಡಿಗಳ ಹಬ್ಬ ನಿಮ್ಮ ಮನೆಯಂಗಳದ ಸೊಬಗು ಹೆಚ್ಚಿಸಲಿ, ಮನದಂಗಳದಿ ಸಂಭ್ರಮ ಸುರಿಯಲಿ.ಈ ದೀಪಾವಳಿಯ ಶುಭ ಗಳಿಗೆಯಲ್ಲಿ ನಾವೆಲ್ಲಾ ಹಚ್ಚೋಣ ಕನ್ನಡದ ದೀಪ.

ಶುಭಾಶಯಗಳೊಂದಿಗೆ

ಪೂರ್ಣಿಮ ಸುಬ್ರಹ್ಮಣ್ಯ.

## ಪರಿಚಯ

- ಮೀನಾ ಭಾರದ್ವಾಜ್



# ಸಹನಾ ಶ್ರೀವತ್ಸ

**ಮ**ಕ್ಕಳು ಮುದ್ದು ಮುದ್ದಾಗಿ ತೊದಲಿದರೆ ಆನಂದ. ಮಕ್ಕಳು ಸ್ಪಷ್ಟವಾಗಿ ಮಾತಾಡಿದರೆ ಬಹಳ ಆನಂದ. ಇನ್ನು ಮಕ್ಕಳು ಮಾತೃ ಭಾಷೆಯಲ್ಲಿ ಅದರಲ್ಲೂ ಅಮೆರಿಕೆಯಲ್ಲಿ ನೆಲೆಸಿ ಸ್ಪಷ್ಟವಾದ ಕನ್ನಡದಲ್ಲಿ ಸ್ಫುಟವಾಗಿ ಹಾಡಿದರೆ ಅದು ಪರಮಾನಂದವೇ ಸರಿ. ಇಲ್ಲಿ ಹೇಳಲು ಬಯಸುತ್ತಿರುವುದು ಕುಮಾರಿ. ಸಹನಾ ಶ್ರೀವತ್ಸಳ ವಿಷಯ. ಇವಳು ಅರಳು ಹುರಿದಂತೆ ಕನ್ನಡದಲ್ಲಿ ಮಾತಾಡುವುದು ಹಾಗು ಹಾಡುವುದು ಮಲ್ಲಿಗೆ ಕನ್ನಡದ ಸಂಘದ ಸದಸ್ಯರಿಗೆ ಹೊಸ ವಿಷಯವೇನು ಅಲ್ಲ.

ನಾ.(ನಾರ್ತ್) ವಿ(ವಿಶ್ವ)ಕ (ಕನ್ನಡ ಅಸ್ಸೋಸಿಯೇಶನ್) ಕಳೆದ ಬೇಸಿಗೆಯಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಅಮೆರಿಕನ್ನಡೋತ್ಸವಕ್ಕೆ ಕುಮಾರಿ ಸಹನಾಳಿಗೂ ಆಮಂತ್ರಣವಿತ್ತು. ರವಿಂದ್ರ ಕಲಾಕ್ಷೇತ್ರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವೈಯುಕ್ತಿಕ ಗಾನಕ್ಕೆ ಅವಕಾಶವಿತ್ತು. ಚಲನಚಿತ್ರಗೀತೆಯಲ್ಲದೆ ಭಾವಗೀತೆಯನ್ನೂ  ಆರಿಸಿಕೊಂಡಿದ್ದಳು. ಇವಳು ಹಾಡಿದ ದ.ರಾ.ಬೇಂದ್ರೆಯವರ 'ಮೂಡಲ ಮನೆಯ' ಹಾಡನ್ನು ಎರಡನೆ ಬಾರಿ ಕರ್ನಾಟಕದ ಮುಖ್ಯ ಮಂತ್ರಿಗಳ ಎದುರು ಹಾಡಲು ಕೇಳಲಾಯಿತು.



ಸ್ಥಳೀಯ ಬೆಂಗಾಲಿ ಸಂಸ್ಥೆಗಳಲ್ಲಿ ಒಂದಾದ ಆನ್ಡೊರಿಕ್ ನಡೆಸುವ ಸ.ರೆ.ಗ.ಮ.ಪ ನಡೆಸುವ ಮಕ್ಕಳ ಸ್ಪರ್ಧೆಗಳಲ್ಲಿ ಸತತವಾಗಿ ಮೂರುವರ್ಷಗಳಿಂದ ಬಹುಮಾನವನ್ನು ಗೆದ್ದಿರುತ್ತಾಳೆ. ಇತ್ತೀಚೆಗೆ ನಡೆದ ಶಂಕರ ನೇತ್ರಾಲಯ ಏರ್ಪಡಿಸಿದ್ದ ಮಕ್ಕಳ ಕಾರ್ಯಕ್ರಮದಲ್ಲಿ ಹಾಗು ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡುವ, ಲಾಭ ರಹಿತ ಸಂಸ್ಥೆಗಳಲ್ಲಿ ಒಂದಾದ ವಿಭಾ ನಡೆಸುವ ಸ್ಪರ್ಧೆಗಳಲ್ಲೂ ಭಾಗವಹಿಸಿರುತ್ತಾಳೆ.

ಇವಳು ಕರ್ನಾಟಕ ಸಂಗೀತವಲ್ಲದೆ, ಹಿಂದೂಸ್ತಾನಿ ಸಂಗೀತವನ್ನು ಅಭ್ಯಸಿಸಿರುತ್ತಾಳೆ. ಶ್ರೀಮತಿ ರೇಣು ಚಂದ್ರ ಅವರ ಮಾರ್ಗದರ್ಶನದಲ್ಲಿ  ಹಿಂದೂಸ್ತಾನಿ ಸಂಗೀತವನ್ನು ಹಾಗು ಶ್ರೀಮತಿ ರಾಜಶ್ರೀ ಶ್ರೀನಿವಾಸನ್ ಅವರಿಂದ ಕರ್ನಾಟಕ ಸಂಗೀತವನ್ನು ಕಲಿಯುತಿದ್ದಾಳೆ. ಕೇವಲ ಸಂಗೀತವಲ್ಲದೆ ನೃತ್ಯ ಹಾಗು ಪಿಯಾನೋ ನುಡಿಸುವುದರಲ್ಲಿ ವಿಶೇಷ ಆಸಕ್ತಿ. ತುಂಡು ಕಾಗದ, ಒಂದು ಪೆನ್ಸಿಲ್ ಕೈಗೆ ಸಿಕ್ಕಿದರೆ ಅವಳ ಕೈ ಚಳಕದಲ್ಲಿ ಮುದ್ದಾದ ಗಣಪತಿ ಚಿತ್ರಗಳು ಮೂಡುತ್ತದೆ.

ಇವಳ ಆಸಕ್ತಿ ಹೀಗೆ ಮುಂದುವರೆದು, ಇವಳ ಪ್ರತಿಭೆ  ಎಲ್ಲೆಡೆ ಪಸರಿಸಲಿ ಎನ್ನುವುದೇ ಕನ್ನಡ ಸಂಘದ ಹಾರೈಕೆ.

ಸಹನಾ ಬಿಡಿಸಿದ ಗಣಪತಿಯ ಒಂದು ಚಿತ್ರ ಮುಂದಿನ ಪುಟದಲ್ಲಿ ...

ದ.ರಾ.ಬೇಂದ್ರೆ – ನಾಕು ತಂತಿ – ೧೯೭೩

## ಚಿಣ್ಣರ ಚಿತ್ತಾರ

ಸಹನಾ ಶ್ರೀವತ್ಸ




# ಚಿತ್ರನಗರಿ

ಪೂರ್ಣಿಮ ಸುಬ್ರಹ್ಮಣ್ಯ

ಕೆಳಕಂಡ ಚಿತ್ರಗಳಲ್ಲಿ ಕರ್ನಾಟಕದ ಊರುಗಳನ್ನು ಗುರುತಿಸಿ


1  +  =


2  +  =

3  +  =


4  +  =


5  +  =

6  +  =

7  +  =

8  +  +  =

9  +  +  =

10  +  +  =

ಉತ್ತರಗಳು ಪುಟ 11

*ಶೋ-ಶೋ ಕತೆ*

## ಎನ್ನ ನೀತಿಯ ಕುರುಡು

- ಪೂರ್ಣಿಮ ಸುಬ್ರಹ್ಮಣ್ಯ

**(ಕಳೆದ ಸಂಚಿಕೆಯಿಂದ)** "ಅಮ್ಮಾ, ಊಟ" ಎಂದ ನೀತಿಯ ಕರೆ ಕ್ಷಮಳನ್ನು ಎಚ್ಚರಗೊಳಿಸಿತು. ಹಿತವಾದ ಊಟ, ಪ್ರೀತಿಯ ಮಾತು ಎಲ್ಲವನ್ನೂ ಮರೆಸಿತು. ಮನೆಗೆ ಬರುವವರೆಗೂ ಗೊಂದಲದ ಗೂಡಾಗಿದ್ದ ಕ್ಷಮಳ ಮನಸ್ಸು ಈಗ ತಿಳಿನೀರ ಸರೋವರದಂತೆ ಪ್ರಶಾಂತವಾಗಿತ್ತು. ಗಂಡನ ಭಾರಿ ಉಡುಗೊರೆಗಿಂತ ಮಗಳು ನೀಡಿದ ಅಚ್ಚರಿಯ ಸರಳ ಸತ್ಕಾರ, ಅವಳೆದೆಯಲ್ಲಿ ಭರವಸೆಯ ಬೆಳಕು ಮೂಡಿಸಿತು. ನೀತಿ ತಾನು ಆತಂಕ ಪಟ್ಟು ಸ್ವಮರುಕದಲ್ಲಿ ನರಳುವ ಸ್ಥಿತಿಯಲ್ಲೇನಿಲ್ಲ. ಮಕ್ಕಳ ಮೇಲಿನ ವ್ಯಾಮೋಹ, ಕಾಳಜಿ ತಂದೆ ತಾಯಿಗಳಿಗೆ ಪ್ರೀತಿ ಎನ್ನಿಸಿದರೆ ಬೆಳೆದ ಮಕ್ಕಳಿಗೆ ಅದು ಬಂಧನವೆನಿಸುವ ಸಾಧ್ಯತೆಯೇ ಹೆಚ್ಚು.

ನಮ್ಮ ಕಾಲದ ರೀತಿ–ನೀತಿ, ಅನುಭವ, ಬಂಧನಗಳೇ ಬೇರೆ. ಈ ಕಾಲದ ಸೂತ್ರಗಳೇ ಬೇರೆ. ನನ್ನ ಪೂರ್ವಜರು ನೆಟ್ಟ ಆಲದ ಮರಕ್ಕೆ ನಾನು ನೇಣು ಹಾಕಿಕೊಳ್ಳಲಾರೆನಾದರೆ, ನಮ್ಮ ಮಕ್ಕಳೂ ಅದೇ ರೀತಿ ಯೋಚಿಸುತ್ತಾರೆ ತಾನೇ? ಆದರೆ ಆ ಆಲದ ಮರದ ವೈಶಾಲ್ಯ, ನೆಳಲು, ತಂಪು, ತಂಗಾಳಿ , ನೆನಪು ನಮಗೆ ಎಲ್ಲ ಕಾಲಕ್ಕೂ ಬೇಕು. ಚಿಗುರೆಲೆ ಹಣ್ಣೆಲೆಗಳಿಗೆ ಪರಸ್ಪರ ತಾತ್ಸಾರ ಇರಬಾರದು ಅಷ್ಟೆ. ನಮ್ಮ ಕಾಲದಲ್ಲಿ ಹಾಗಿತ್ತು, ಹೀಗಿತ್ತು ಎಂದು ಪ್ರತಿಯೊಬ್ಬರೂ ತಮ್ಮ ಜೀವಮಾನದಲ್ಲಿ ಹಲುಬುತ್ತಾರೆ. ಕಾಲ ಹಾಗೇ ಇತ್ತು, ಬದಲಾದವರು ನಾವು. ನಿಂತ ನೀರಂತಾದರೆ ಕೊಳೆಯುವ ಅಳುಕು. ನಿರಂತರ ಚಲನೆಯೇ ಬದುಕಿನ ಜೀವಾಳ.

ಯಾವುದು ಯಾವುದೋ ಭಾವನೆಗಳ ತರಂಗಗಳಲ್ಲಿ ತೇಲುತ್ತಿದ್ದ ಕ್ಷಮಾಳನ್ನು ಎಚ್ಚರಗೊಳಿಸಿದ್ದು, ನೀತಿ ತನ್ನಷ್ಟಕ್ಕೆ ತಾನು ಹಾಡುತ್ತಿದ್ದ ಬಿ.ಆರ್.ಲಕ್ಷ್ಮಣ ರಾಯರ ಭಾವಗೀತೆ.

"ಅಮ್ಮಾ ನಿನ್ನ ಎದೆಯಾಳದಲ್ಲಿ
ಗಾಳಕ್ಕೆ ಸಿಕ್ಕ ಮೀನು,
ಮಿಡುಕಾಡುತಿರುವೆ ನಾನು".

ಕ್ಷಮ ಶಾಂತವಾಗಿ ನೀತಿಯ ಬಳಿಗೆ ಹೋದಳು. " Thanks ನೀತಿ, ನೀನು ಇಂದು ಮಾಡಿದ ಔತಣ, ಕೇವಲ ನನ್ನ ಹಸಿದ ಹೊಟ್ಟೆಗಷ್ಟೇ ಅಲ್ಲ, ಬಳಲಿದ ಮನಸಿಗೂ ತಂಪು. ನೀನು ಸರಿಯಾದ ದಾರಿಯಲ್ಲೇ ಹೋಗುವ ವಿಶ್ವಾಸ ನಮಗಿದೆ. ಇನ್ನು ಮುಂದೆ ನಿನಗಾಗಿ ನಿರ್ಧಾರಗಳನ್ನು ನಾನು ತೆಗೆದುಕೊಳ್ಳುವುದಿಲ್ಲ, ನೀನೇ ತಗೋ. ಆದರೆ ಅಲ್ಲಿ ಸಂಭ್ರಮದ ಜೊತೆ, ಜವಾಬ್ದಾರಿಯೂ ಇರಲಿ. ಸ್ವಾತಂತ್ರ್ಯಕ್ಕೂ ಸ್ವೇಚ್ಛೆಗೂ ನಡುವಿನ ಗೆರೆ ಬಹಳ ತೆಳು. ಆ ಗೆರೆಯನ್ನು ನೀನು ಗುರುತಿಸುವುದಾದರೆ ಸರಿ, ಇಲ್ಲವಾದರೆ ನಮ್ಮ ಸಹಾಯ ತಗೋ. We are your friends."

ಮುಗುಳ್ನಕ್ಕ ನೀತಿ ಹೇಳಿದಳು "Thanks ಅಮ್ಮ. I will not let you down."

ನೀತಿ ಮುಂದುವರಿಸಿದ ಹಾಡು ಕ್ಷಮಳಿಗೆ ಲಾಲಿಯಂತಿತ್ತು.

"ಮೇಲೆ ಹಾರಿ ನಿನ್ನ ಸೆಳೆತ ಮೀರಿ
ನಿರ್ಭಾರ ಸ್ಥಿತಿಗೆ ತಲುಪಿ
ಬ್ರಹ್ಮಾಂಡವನ್ನೇ ಬೆದಕಿ
ಇಂಧನ ತೀರಲು
ಬಂದೇ ಬರುವೆನು
ಮತ್ತೆ ನಿನ್ನ ತೊಡೆಗೆ
ಮೂರ್ತ ಪ್ರೇಮದೆಡೆಗೆ".

(ಮುಗಿಯಿತು)

*ಶುಭಾಶಯ*



**ಈ ನವರಾತ್ರಿಯಲ್ಲಿ, ಲೂಯಿಸ್‌ವಿಲ್ ನಗರದ ಆಶಾ ಮತ್ತು ವಾಸು ದಂಪತಿಗಳ ಮನೆಗೆ ಹೊಸ ನವರಾತ್ರಿ ಬೊಂಬೆ. ಮುದ್ದು "ಸಾನ್ವಿ" ಜನಿಸಿದ್ದು ಸೆಪ್ಟೆಂಬರ್ ೩೦ರಂದು. ಪುಟಾಣಿ ಅಕ್ಕ ಧೃತಿ ಸಾನ್ವಿಯೊಡನೆ ಆಟ ಆಡಲು ಸದಾ ಸಿದ್ಧ. ಮಲ್ಲಿಗೆ ಸಂಘದ ಪರವಾಗಿ ಆಶಾ, ವಾಸು, ಧೃತಿಗೆ ಅಭಿನಂದನೆಗಳು. ಪುಟಾಣಿ ಸಾನ್ವಿಗೆ ಶುಭ ಹಾರೈಕೆಗಳು.**

ವಿನಾಯಕ ಕೃಷ್ಣ ಗೋಕಾಕ – ಭಾರತ ಸಿಂಧು ರಶ್ಮಿ – ೧೯೯೦

# ಪಿಕ್‌ನಿಕ್



ಮಲ್ಲಿಗೆ ಕನ್ನಡ ಸಂಘದ ಈ ಬಾರಿಯ ಪಿಕ್‌ನಿಕ್ ಗ್ರೇಪ್‌ವೈನ್ ನಗರದ ಪಾರ್ ಪಾರ್ಕ್‌ನಲ್ಲಿ ಅಕ್ಟೋಬರ್ ಆರಂದು ನಡೆಯಿತು. ನೂರಾರು ಕನ್ನಡಿಗರು ಆಟ-ಊಟ-ಹರಟೆಗಳಲ್ಲಿ ಭಾಗವಹಿಸಿ ಸಂತಸಪಟ್ಟರು. ವಾಕಥಾನ್ ನಲ್ಲಿ ಅನೇಕ ಮಂದಿ ಭಾಗವಹಿಸಿ, ಸಂಗ್ರಹಿಸಿದ $೩೦೦ ಹಣವನ್ನು " ಅವರ್ ಚಿಲ್ಡ್ರನ್ಸ್ ಹೌಸ್ ಅಟ್ ಬೇಲರ್, ಡಲ್ಲಾಸ್" ಸಂಸ್ಥೆಗೆ ದೇಣಿಗೆಯಾಗಿ ನೀಡಲಾಯಿತು. ಪಿಕ್‌ನಿಕ್‌ನ ಹಲವು ಚಿತ್ರಗಳ ಒಂದು ಸಂಯೋಜನೆ ನಿಮಗಾಗಿ...



ಯು.ಆರ್.ಅನಂತಮೂರ್ತಿ – ಸಮಗ್ರ ಸಾಹಿತ್ಯ – ೧೯೯೪

## ಯೆರಿಯಪ್ಪ



**ಈ**ಗ ತಾನೇ ಮುಗಿದ ನವರಾತ್ರಿಯ ಸಾಲಿನಲ್ಲಿ ಮೂಲಾನಕ್ಷತ್ರದ ದಿನದಂದು ಕನ್ನಡಿಗರು ಸರಸ್ವತಿ ಹಬ್ಬವನ್ನು ಆಚರಿಸುತ್ತಾರೆ. ಈ ದಿನದಂದೇ ಮಾಡುವ ವಿಶೇಷ ಖಾದ್ಯ 'ಯೆರಿಯಪ್ಪ'.ಭಾರತದ ಹಾಗೆ ಯಾವುದೇ ವಿಶೇಷ ರಜೆ ದಸರಾ ಹಬ್ಬಕ್ಕೆ ಇಲ್ಲಿ ಸಿಗುವುದಿಲ್ಲ. ಇಲ್ಲಿಯ ಪರಿಸರ ಅಲ್ಲಿಯ ಸಂಸ್ಕೃತಿ ಎರಡನ್ನು ಪಾಲಿಸಬೇಕಾದಂತ ಮಹಿಳಾಮಣಿಗಳಿಗೆ ಅನು ಶಿವಾನಿಯವರು ಕ್ಷಿಪ್ರವಾಗಿ ತಯಾರಿಸ ಬಹುದಾದ 'ಯೆರಿಯಪ್ಪದ' ವಿಧಾನವನ್ನು ತಿಳಿಸಿದ್ದಾರೆ.

### ಬೇಕಾದ ಪದಾರ್ಥಗಳು

1. ಎರಡು ಕಪ್ ಗೋಧಿ ಹಿಟ್ಟು.
2. ಒಂದು ಟೇಬಲ್ ಸ್ಪೂನ್ ಅಕ್ಕಿ ಹಿಟ್ಟು.
3. ಒಂದು ಕಳಿತ ಬಾಳೆ ಹಣ್ಣು.
4. ಒಂದೂವರೆ ಲೋಟ ಸಕ್ಕರೆ.

### ವಿಧಾನ

ಇದು ಬೇಗ ತಯಾರಾಗುವ ಜೊತೆಗೆ ಆರೋಗ್ಯಕರವೂ ಹೌದು. ಮೇಲೆ ತಿಳಿಸಿದ ಪದಾರ್ಥಗಳನ್ನೆಲ್ಲ ಕಡಿಮೆ ಪ್ರಮಾಣದ ನೀರಿನೊಂದಿಗೆ ಒಟ್ಟಿಗೆ ಮಿಕ್ಸಿಯಲ್ಲಿ ರುಬ್ಬಿಕೊಳ್ಳುವುದು. ಇಡ್ಲಿ ಮಾಡುವ ಹದಕ್ಕೆ ಮಂದವಾದ ಮಿಶ್ರಣವನ್ನು ತಯಾರಿಸಬೇಕು. ಮಲೆನಾಡಿನ ಗುಳಿಯಪ್ಪ, ಬಯಲು ಸೀಮೆಯ ಪಡ್ಡು ಮನೆಗಳಲ್ಲಿ ಪ್ಯಾಂ ಸ್ಪ್ರೆ ಅಥವಾ ಸ್ವಲ್ಪ ತುಪ್ಪವನ್ನು ಹಚ್ಚಿ ತುಸು ಕಂದು ಬಣ್ಣ ಬರುವ ಹಾಗೆ ಹದವಾದ ಉರಿಯಲ್ಲಿ ಎರಡು ಕಡೆ ಬೇಯಿಸಿದರೆ ಯೆರಿಯಪ್ಪ ತಯಾರ್.





ಯಾವುದೇ ಶಾರ್ಟ್ ಕಟ್ಟಳಿಲ್ಲದೆ ಶಾಸ್ತ್ರೋಕ್ತವಾಗಿ 'ಯೆರಿಯಪ್ಪ' ಮಾಡಬೇಕೆಂದಿರುವವರಿಗೆ ಶ್ರೀಮತಿ ರೂಪ ಉಪಾಧ್ಯ, ಅವರ ವಿಧಾನವನ್ನು ತಿಳಿಸಿರುತ್ತಾರೆ.

### ಬೇಕಾಗುವ ಪದಾರ್ಥಗಳು.

1. ಎರಡು ರೈಸ್ ಕಪ್ ಅಷ್ಟು ಅಕ್ಕಿ
2. 3/4 ಅಷ್ಟು ತೆಂಗಿನ ಕಾಯಿ
3. 1 1/4 ಕಪ್ ಬೆಲ್ಲ
4. 5-6 ಎಲ್ಲಕ್ಕಿಯ ಪುಡಿ
೫. ಕರಿಯಲು ತಕ್ಕ ಮಟ್ಟಿಗೆ ಎಣ್ಣೆ.

### ವಿಧಾನ

ಅಕ್ಕಿಯನ್ನು ಕನಿಷ್ಠ ಮೂರು ಗಂಟೆಗಳ ಕಾಲ ನೆನೆಸಬೇಕು. ನಂತರ ಮೇಲೆ ತಿಳಿಸಿದ ಪದಾರ್ಥಗಳನ್ನೆಲ್ಲ ಒಟ್ಟುಗೂಡಿ ಸ್ವಲ್ಪ ಪ್ರಮಾಣದ ನೀರಿನೊಂದಿಗೆ ಗಟ್ಟಿಯಾಗಿ ರುಬ್ಬಿಕೊಳ್ಳಿ. ಬಾಣಲೆಯಲ್ಲಿ ಕರಿಯಲು ಬೇಕಾದಷ್ಟು ಎಣ್ಣೆಯನ್ನು ಇಟ್ಟು, ಎಣ್ಣೆ ಕಾದ ನಂತರ ಸಣ್ಣ ಸಣ್ಣ ಉಂಡೆಗಳನ್ನಾಗಿ ಎಣ್ಣೆಯಲ್ಲಿ ಬಿಟ್ಟು ಹದವಾಗಿ ಕರಿಯುವುದು. ಉಂಡೆಗಳನ್ನು ಹೊಂಬಣ್ಣಕ್ಕೆ ಕರೆದು ತೆಗೆದರೆ ರುಚಿ ಹೆಚ್ಚು.

ಗಿರೀಶ್ ಕಾರ್ನಾಡ್ – ಸಮಗ್ರ ಸಾಹಿತ್ಯ – ೧೯೯೮

## ಕ್ರೀಡಾಲೋಕ

- ಮೀನಾ ಭಾರದ್ವಾಜ್



ಕ್ರಿಕೆಟ್ ಒಂದು ಪಾಶ್ಚಾತ್ಯ ಕ್ರೀಡೆ. ಇದು ಬ್ರಿಟಿಷರು ನಮಗೆ ಬಿಟ್ಟಿರುವ ಬಳುವಳಿ, ದಾಸ್ಯತ್ವದ ಸಂಕೇತ. ಶಾಸ್ತ್ರೀಯ ಕ್ರೀಡೆಗಳಿಗೆ ಮನ್ನಣೆ ನೀಡಬೇಕು, ಈ ಮಾತಿಗೆಲ್ಲ ಅಪವಾದದಂತೆ ಕ್ರಿಕೆಟ್ಗೆ ಇರುವ ಜನಪ್ರಿಯತೆ ಭಾರತದಲ್ಲಿ ಇನ್ನ್ಯಾವುದೇ ಕ್ರೀಡೆಗೂ ಇಲ್ಲ ಅಂದರೆ ತಪ್ಪಾಗಲಾರದು. ಮಕ್ಕಳಿಂದ ಹಿಡಿದು ಹಿರಿಯರವರೆಗೆ, ಬಾಲಕರು ಬಾಲಕಿಯರು, ಮಹಿಳೆಯರು ಎಂದು ಭೇದವಿಲ್ಲದೆ ಎಲ್ಲ ವರ್ಗದವರನ್ನು ಎಲ್ಲ ಸಮಯದಲ್ಲೂ ಆಕರ್ಷಿಸಬಲ್ಲ ಅಯಸ್ಕಾಂತದ ಶಕ್ತಿ ಈ ಕ್ರೀಡೆಗೆ ಇದೆ. ಭಾರತದ ಕ್ರಿಕೆಟ್ ತಂಡಕ್ಕೆ ಕರ್ನಾಟಕದ ಕೊಡುಗೆ ಅಪಾರ. ಗುಂಡಪ್ಪ ವಿಶ್ವನಾಥ್, ಕೀರ್ಮಾನಿ, ರೋಜರ್ ಬಿನ್ನಿ, ಪ್ರಸನ್ನ, ಚಂದ್ರಶೇಖರ್, ಬ್ರಿಜೇಷ್ ಪಟೇಲ್, ಸದಾನಂದ್ ವಿಶ್ವನಾಥ್ ಅಲ್ಲದೆ ನಂತರ ಬಂದ ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ವೆಂಕಟೇಶ್ ಪ್ರಸಾದ್ ಇತ್ಯಾದಿ...ಹೆಸರಿಸಬಹುದಾದ ಖ್ಯಾತನಾಮರು.

ತನ್ನ ಕೈ ಚಳಕದಿಂದ ಭಾರತದ ವಿಕೆಟ್ಗಳನ್ನು ಕಾಪಾಡಿದ, ಅಲ್ಲನ್ ಬಾರ್ಡರ್,ಸುನಿಲ್ ಗವಾಸ್ಕರ್, ಗುಂಡಪ್ಪ ವಿಶ್ವನಾಥ್ ಅಂಥವರಿಂದ ಪ್ರಶಂಸಿಸಲ್ಪಟ್ಟ ಸದಾನಂದ್ ವಿಶ್ವನಾಥ್ ಡಲ್ಲಾಸ್ ನಗರಕ್ಕೆ ಬಂದು ಇಲ್ಲಿನ ಮಕ್ಕಳಿಗೆ ಒಂದು ಪುಟ್ಟ ಕ್ರಿಕೆಟ್ ಶಿಬಿರವನ್ನು ನಡೆಸುವ ಉದ್ದೇಶವಿದೆಯೆಂದು ಮಲ್ಲಿಗೆ ಕನ್ನಡ ಸಂಘದ ಸದಸ್ಯರಲ್ಲಿ ಒಬ್ಬರಾದ ಶ್ರೀ.ತೇಜರಾಜ್ ಶ್ರೀನಿವಾಸನ್ ಅವರು ಒಂದು ಇಮೇಲ್ ಅನ್ನು ಮಲ್ಲಿಗೆ ಕನ್ನಡ ಸಂಘದ ಸದಸ್ಯರಿಗೆ ಹಾಗೂ ಸ್ನೇಹಿತ ವರ್ಗದವರಿಗೆ ಕಳುಹಿಸಿದರು. ಮಕ್ಕಳನ್ನು ಬೇಸಿಗೆ ರಜೆಯಲ್ಲಿ ಬಿಜಿ ಇಡುವುದು ಹೇಗೆ ಎಂದು ಯೋಚಿಸುತ್ತಿದ್ದ ಪೋಷಕರಿಗೆ ಈ ವಿಷಯ ಒಂದು ವರದಾನವೇ ಆಯಿತು. ಕನ್ನಡಿಗರೇ ಅಲ್ಲದೆ ಕನ್ನಡೇತರರನ್ನೂ ತಲುಪಿತು. ವಾರದಲ್ಲಿ ಮೂರು ದಿನದ ಹಾಗೆ ಪ್ಲೇನೋ ನಗರದ ರಸ್ಸಲ್ ಕ್ರೀಕ್ ಪಾರ್ಕ್ನಲ್ಲಿ ಕ್ರಿಕೆಟ್ ಶಿಬಿರ ಪ್ರಾರಂಭವಾಯಿತು. ಈ ಶಿಬಿರಕ್ಕೆ ರಸ್ಸಲ್ ಕ್ರೀಕ್ಗೆ ಹತ್ತಿರವಾದ ಪ್ಲೇನೋ, ಅಲ್ಲೇನ್, ಫ್ರಿಸ್ಕೋ ನಗರದವರಲ್ಲದೆ, ಇರ್ವಿಂಗ್,ಕೊಪ್ಪೆಲ್ ಹಾಗು ಫ್ಲವರ್ ಮೌಂಡ್ ಮಕ್ಕಳು ಸಹ ಬಂದು ಭಾಗವಹಿಸಿದರು. ಸುಮಾರು ೨೫ ಮಕ್ಕಳ ತಂಡ ಇದಾಗಿತ್ತು.

ವಿಶಿ ಎಂದೇ ಕರೆಯಲ್ಪಡುವ ಸದಾನಂದ್ ವಿಶ್ವನಾಥ್ ಕಳೆದ ೧೫ ವರ್ಷಗಳಿಂದ ಬೆಂಗಳೂರು ನಗರದಲ್ಲಿ ಮಕ್ಕಳು ಹಾಗು ಯುವಕರಿಗೆ ಈ ಕ್ರೀಡೆಯ ತರಬೇತಿಯನ್ನು ನೀಡುತ್ತಿದ್ದಾರೆ. ಒಂದು ಕಾಲದಲ್ಲಿ ತನಗೆ ಇದ್ದಂಥ ಸೌಲಭ್ಯದಿಂದ ಹಾಗು ಒಳ್ಳೆಯ ತರಬೇತಿಯಿಂದ ವಂಚಿತರಾದ ಮಕ್ಕಳಿಗೆ ಕಲಿಸುವುದೇ ಇವರ ಆಶಯ. ಮಕ್ಕಳ ಜೊತೆ ಬೆರೆತು, ಆಡಿ ಅಭ್ಯಾಸವಿರುವ ವಿಶಿಗೆ ಸ್ಥಳೀಯ ಮಕ್ಕಳ ಹೃದಯವನ್ನು ಗೆಲ್ಲಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಹೀಗೆ ಕರ್ನಾಟಕದಿಂದ ಬಂದ ವಿಶೇಷ ಅತಿಥಿಯನ್ನು ಸತ್ಕರಿಸಲು ಮಲ್ಲಿಗೆ ಕನ್ನಡ ಸಂಘ ಮರೆಯಲಿಲ್ಲ. ಇಲ್ಲಿನ ರೆಸ್ಟೋರೆಂಟ್ಗಳಲ್ಲಿ ಒಂದಾದ 'ಉಡುಪಿ' ಯಲ್ಲಿ ಇವರಿಗೆ ಹಾಗು ಸದಸ್ಯರಿಗೆ ಅವರನ್ನು ಭೇಟಿ ಮಾಡಿ ಮಾತಾಡುವ ಅವಕಾಶವನ್ನು ಕಲ್ಪಿಸಿತು.

(ಸದಾನಂದ್ ವಿಶ್ವನಾಥ್ ಅವರೊಂದಿಗಿನ ಸದಸ್ಯರ ಭೇಟಿಯ ಚಿತ್ರಗಳು ಮುಂದಿನ ಪುಟದಲ್ಲಿ )



ಮುಂದಿನ ಸಂಚಿಕೆಯನ್ನು ಸಂಕ್ರಾಂತಿ 2012ರ ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.

ಚಿತ್ರನಗರಿಯ ಉತ್ತರಗಳು

೧. ಬಾಗಲಕೋಟೆ
೨. ತಾಳೀಕೋಟೆ
೩. ಚಿತ್ರದುರ್ಗ
೪. ಹೊಸಕೋಟೆ
೫. ರಾಮದುರ್ಗ
೬. ಮೇಲುಕೋಟೆ
೭. ಕಾಕನಕೋಟೆ
೮. ಸಾವನದುರ್ಗ
೯. ದೇವರಾಯನದುರ್ಗ
೧೦. ಹೆಗ್ಗಡದೇವನಕೋಟೆ

ಸಿರಿಗನ್ನಡಂ ಗೆಲ್ಗೆ